ಸಾಧ್ಯವೋ ಅದನ್ನು ಮಾಡುತ್ತೇನೆ.

ಅಧ್ಯಕ್ಷರು:- ಮುಂದಿನ ಪ್ರಶ್ನೆ ಶ್ರೀ ವಿಶ್ವೇಶ್ವರ ಹೆಗಡೆಯವರದನ್ನು ತಡೆಹಿಡಿಯುತ್ತೇನೆ. ಮುಂದಿನ ವಾರ ಅವರಿದ್ದಾಗ ತೆಗೆದುಕೊಳ್ಳೋಣ.

ವಿಷಯ:- ಚಿಕ್ಕಮಗಳೂರಿನ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 172 (1063)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಪ್ರವಾಸೋದ್ಯಮ ಕೇಂದ್ರಗಳಿವೆ?

ಆ) ಈ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಗಾಗಿ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು? ಯಾವ ಯಾವ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಯನ್ನು ಮಾಡಲಾಗಿದೆ?

ಇ) 1994-95 ಹಾಗೂ 1995-96ನೇ ಸಾಲಿನಲ್ಲಿ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಗಾಗಿ ಖರ್ಚಾಗಿರುವಂತಹ ಹಣವೆಷ್ಟು (ವಿವರ ನೀಡುವುದು).

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 17 ಪ್ರವಾಸೋದ್ಯಮ ಕೇಂದ್ರಗಳಿವೆ.

ಆ) ಈ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ನೀತಿ ಜಾರಿಗೆ ತರಲಾಗಿದೆ. ಈ ನೀತಿಯಂತೆ ಈ ಸ್ಥಳಗಳಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ನಿರ್ಮಿಸಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಸಬ್ಸಿಡಿ, ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸಲಾಗುವುದು ಅಲ್ಲದೆ, ಇಲಾಖೆಯು ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೊಂಡಿರುತ್ತದೆ.

1. ಕೇಂದ್ರ ಧನ ಸಹಾಯದಿಂದ ರೂ. 42.29 ಲಕ್ಷ ವೆಚ್ಚದಲ್ಲಿ ಚಿಕ್ಕಮಗಳೂರು ಬಳಿ ಹೆದ್ದಾರಿ ಸೌಲಭ್ಯ ನಿರ್ಮಿಸಲಾಗಿದೆ. ಇದನ್ನು ನಿರ್ವಹಣೆಗಾಗಿ ತಾಜ್ ಕರ್ನಾಟಕ ಹೋಟೆಲ್ಸ್ ಮತ್ತು ರಿಸಾರ್ಟ್ಸ್ ಸಂಸ್ಥೆಗೆ ವಹಿಸಿಕೊಡಲಾಗಿದೆ.

2. ಚಿಕ್ಕಮಗಳೂರಿನಲ್ಲಿ ತಾಜ್ ಕರ್ನಾಟಕ ಹೋಟೆಲ್ಸ್ ಮತ್ತು ರಿಸಾರ್ಟ್ಸ್ ನಿಯಮಿತದವರು ರಸ್ತೆ ಬದಿ ರೆಸಾರ್ಟ್ಸ್ ಅಭಿವೃದ್ಧಿಗೊಳಿಸುತ್ತಿದ್ದು, ಅದರ ಬಗ್ಗೆ ಟೆಂಡರ್‌ಗಳನ್ನು ಕರೆದು ಸದರಿ ಟೆಂಡರ್‌ಗಳನ್ನು ಈ ದಿವಸ ತೆರೆಯಲಾಯಿತು. ಈ

ರೆಸಾರ್ಟ್ಸ್‌ಗಳ ನಿರ್ಮಾಣವು ಈ ವರ್ಷದ ಅಂತ್ಯಕ್ಕೆ ಮುಗಿಯಲಿದ್ದು ಕಾರ್ಯಾಚರಣೆಗೆ ತರಲಾಗುವುದು.

3. ಶೃಂಗೇರಿಯಲ್ಲಿ ಕೇಂದ್ರ ಧನ ಸಹಾಯದಿಂದ ರೂ.9.15 ಲಕ್ಷ ಅಂದಾಜು ವೆಚ್ಚದಲ್ಲಿ ಉಪಹಾರ ಮತ್ತು ವಸತಿ ಗೃಹ ಹಾಗೂ ರೂ. 40.52 ಲಕ್ಷ ಅಂದಾಜು ವೆಚ್ಚದಲ್ಲಿ ಯಾತ್ರಿ ನಿವಾಸವನ್ನು ನಿರ್ಮಿಸಲಾಗುತ್ತಿದೆ.

4. ಕುದುರೆ ಮುಖದಲ್ಲಿ ರೂ.30.00 ಲಕ್ಷ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸಂಕೀರ್ಣವನ್ನು ನಿರ್ಮಿಸಲಾಗುತ್ತಿದೆ.

5. ಕೆಮ್ಮಣ್ಣುಗುಂಡಿಯಲ್ಲಿ ಸಾಹಸ ಕ್ರೀಡಾ ಕೇಂದ್ರ ಸ್ಥಾಪನೆಗಾಗಿ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಬೆಂಗಳೂರುರವರಿಗೆ ರೂ.5.00 ಲಕ್ಷಗಳ ಮೌಲ್ಯದ ಕ್ರೀಡಾ ಉಪಕರಣಗಳನ್ನು ಒದಗಿಸಲಾಗಿದೆ.

6. ಕೇಂದ್ರ ಧನ ಸಹಾಯದಿಂದ ಶೃಂಗೇರಿ ಮತ್ತು ಬಾಬಾ ಬುಡನ್‌ಗಿರಿಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಸುಲಭ್ ಶೌಚಾಲಯ ಸಂಕೀರ್ಣ ನಿರ್ಮಿಸಲಾಗಿದೆ.

7. ಕೆಮ್ಮಣ್ಣು ಗುಂಡಿಯಲ್ಲಿ ಕೇಂದ್ರ ಧನ ಸಹಾಯದಿಂದ ರೂ.41.34 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಹಿಲ್ ಕಾಟೇಜ್ ನಿರ್ಮಿಸಲಾಗುವುದು.

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಖರ್ಚಾಗಿರುವ ಹಣ:

1994-95	-	ರೂ. 49.34 ಲಕ್ಷಗಳು
1995-96	-	ರೂ. 43.00 ಲಕ್ಷಗಳು

+ಶ್ರೀ ಸಿ.ಆರ್.ಸಗೀರ್ ಅಹಮದ್:- ಅಧ್ಯಕ್ಷರೇ, ಈ ಪ್ರಶ್ನೆ ಕೇಳುತ್ತಾ ತಮ್ಮಲ್ಲಿ ಕ್ಷಮೆ ಕೇಳಬೇಕಾಗುತ್ತದೆ ಕಾರಣವೇನೆಂದರೆ ಸರ್ಕಾರ ಬಂದು ಒಂದೂ ಮುಕ್ಕಾಲು ವರ್ಷವಾಯಿತು. ಹಿಂದೆಯೂ ಕೂಡ ಪ್ರಶ್ನೆ ಹಾಕಿದ ಸಂದರ್ಭದಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ನಾವು ಹಣ ಮೀಸಲಿಟ್ಟಿದ್ದೇವೆ ಅವುಗಳನ್ನು ಅಭಿವೃದ್ಧಿಪಡಿಸುತ್ತೇವೆಂದು ನನಗೆ ಭರವಸೆ ಕೊಟ್ಟಿದ್ದರು. ಆದರೆ ಕೊಟ್ಟಿರುವ ಉತ್ತರದಲ್ಲಿ 94-95, 95-96ನೇ ಸಾಲಿನಲ್ಲಿ ನಾನು ನಗರಾಭಿವೃದ್ಧಿ ಸಚಿವನಾಗಿದ್ದ ಸಂದರ್ಭದಲ್ಲಿ ಶೃಂಗೇರಿಯಲ್ಲಿ ಏನು ಯಾತ್ರಿಕನಿವಾಸ ಉದ್ಘಾಟನೆಯಾಗಿತ್ತು. ಅದು ಆಗಿದ್ದು ಈಗ ಹಮ್ಮಿಕೊಂಡಿರುವ ಕಾರ್ಯಕ್ರಮಗಳೆಲ್ಲಾ ಬಹಳ ಹಿಂದೆ ನಡೆದಿರುವಂಥವು. ಇವರು ಅಧಿಕಾರಕ್ಕೆ ಬಂದ ನಂತರ ಹೊಸದಾಗಿ ಒಂದು ಯೋಜನೆಯನ್ನೂ ಕೈಗೆತ್ತಿಕೊಳ್ಳದಿರುವ ವಿಷಯ ವಿಷಾದನೀಯ. ಏಕೆಂದರೆ ಚಿಕ್ಕಮಗಳೂರಿನಲ್ಲಿ ಎತ್ತರವಾದ ಸ್ಥಳವೆಂದರೆ ಮುಳ್ಳಯ್ಯನಗಿರಿ, ಅದರ ಅಭಿವೃದ್ಧಿಗಾಗಿ ಪ್ರತ್ಯೇಕ ಒಂದು ಪ್ರಶ್ನೆ ಹಾಕಿದ್ದೆ. ಸಾವಿರಾರು ಭಕ್ತಾದಿಗಳು ಈ ದೇವಾಲಯ ನೋಡಲು ಬರುತ್ತಿರುವಾಗ ಆ ರಸ್ತೆಯನ್ನು ಅಗಲ ಮಾಡುವ ಬಗ್ಗೆ

ಸರ್ಕಾರದ ಮುಂದೆ ಪ್ರಸ್ತಾವನೆ ಇಟ್ಟಿದ್ದೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಆ ಸಂದರ್ಭದಲ್ಲಿ ಮಾತನಾಡಿದ್ದರು. ಪ್ರವಾಸಿಕೇಂದ್ರಗಳ ವ್ಯವಸ್ಥೆ ಅವ್ಯವಸ್ಥೆಯಾಗಿದೆ, ಜಿರಲೆ, ಇಲಿಗಳಿರುತ್ತವೆ ಎಂದು ಹೇಳಿದ್ದರು. ಆ ನಡವಳಿಕೆಗಳನ್ನು ನಾನು ತಂದಿದ್ದೇನೆ. ಆದರೆ ಸರ್ಕಾರ ಈ ಎರಡು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ಪ್ರವಾಸಿಕೇಂದ್ರಗಳ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕ್ರಮಗಳೇನು? ಎರಡನೆಯದು ಕೇಂದ್ರದ ವತಿಯಿಂದ ಸಾಲ ಅಥವಾ ಸಹಾಯದ ರೂಪದಲ್ಲಿ ಹಣ ಪಡೆದು ಯೋಜನೆಗಳು ಸಿದ್ಧವಾಗಿರುವುದರ ಬಗ್ಗೆ ನನಗೂ ತಿಳಿದಿದೆ. ಆದರೆ ರಾಜ್ಯಸರ್ಕಾರದಿಂದಲೇ ಸಣ್ಣಪುಟ್ಟ ಪ್ರವಾಸಿಕೇಂದ್ರಗಳಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮವೇನು? ಮೂರನೆಯದಾಗಿ, ಬಾಬಾಬುಡನ್‌ಗಿರಿ ಇನಾಂ ದತ್ತಾತ್ರೇಯ ಪೀಠ - ಇದು ಹೆಸರುವಾಸಿಯಾದ ಪೀಠ, ಇಲ್ಲಿ ಯಾತ್ರಿಕನಿವಾಸಕ್ಕಾಗಿ ಕೇಂದ್ರಸರ್ಕಾರ ಒಪ್ಪಿಗೆ ನೀಡಿ ಜಾಗವನ್ನೂ ಮೀಸಲಿಟ್ಟಿದ್ದರು, ಆ ಯೋಜನೆ ಏನಾಯಿತು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್:- ಅಧ್ಯಕ್ಷರೇ, 1995-96ರಲ್ಲಿ ಹಣ ಖರ್ಚುಮಾಡಿಲ್ಲವೆಂದು ಅವರ ಆಕ್ಷೇಪಣೆ ಇದೆ, ಹಣ ಖರ್ಚಾಗಿದೆ 1994-95ರಲ್ಲಿ 49.34 ಲಕ್ಷ, 1995-96ರಲ್ಲಿ 43 ಲಕ್ಷಗಳನ್ನು ಖರ್ಚುಮಾಡಿದ್ದೇವೆ. ವಿಶೇಷವಾಗಿ ಕೆಮ್ಮಣ್ಣುಗುಂಡಿಯಲ್ಲಿ ಕ್ರೀಡಾಕೇಂದ್ರಸ್ಥಾಪನೆಗಾಗಿ ರಾಷ್ಟ್ರೀಯ ಅಕಾಡೆಮಿ, ಬೆಂಗಳೂರು ಇವರಿಗೆ 5 ಲಕ್ಷ ರೂ.ಗಳ ಕ್ರೀಡಾ ಉಪಕರಣಗಳನ್ನು ಕೊಡಲಾಗಿದೆ. ಕೇಂದ್ರಸಹಾಯದಿಂದ ಶೃಂಗೇರಿ ಮತ್ತು ಬಾಬಾಬುಡನ್‌ಗಿರಿಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಸುಲಭಶೌಚಾಲಯಗಳ ಸಂಕೀರ್ಣ ಇವತ್ತು ನಿರ್ಮಿಸಲಾಗಿದೆ. ಕೆಮ್ಮಣ್ಣುಗುಂಡಿಯಲ್ಲಿ ಕೇಂದ್ರಧನ ಸಹಾಯದಿಂದ 43.34 ಲಕ್ಷ ಅಂದಾಜು ವೆಚ್ಚದಲ್ಲಿ ಒಂದು ಕಾಟೇಜನ್ನು ನಿರ್ಮಿಸಲಾಗಿದೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಕೆಮ್ಮಣ್ಣುಗುಂಡಿಯ ಪ್ರವಾಸಿ ಸಂಕೀರ್ಣ ನಿರ್ಮಾಣದ ಬಗ್ಗೆ ಏನಾಗಿದೆ ಎಂದರೆ ಅರಣ್ಯ ಇಲಾಖೆಗೆ ಸೇರಿರುವ ಭೂಮಿ ಎಂದು ಇವತ್ತಿನವರೆಗೂ ಲೋಕೋಪಯೋಗಿ ಇಲಾಖೆಗೆ ಜಾಗ ಬಿಟ್ಟುಕೊಟ್ಟಿಲ್ಲ, ಜಿಲ್ಲಾಪಂಚಾಯಿತಿ ಸಭೆಗಳಲ್ಲಿ ಬಹಳಷ್ಟು ಸಾರಿ ಚರ್ಚೆಯಾಗಿದೆ. ಪಿಡಬ್ಲ್ಯುಡಿ ಇಲಾಖೆಗೆ ನಾವು ಕಾಗದ ಬರೆದಿದ್ದೇವೆ. ಆದರೆ ಸರ್ಕಾರ ಹೇಳುತ್ತದೆ ನಾವು ಕೆಲಸ ಪ್ರಾರಂಭ ಮಾಡಿದ್ದೇವೆ ಎಂದು, ಹೀಗಾದರೆ ತಮ್ಮ ಮೂಲಕ ಅವರಿಗೆ ನಾನು ಪ್ರಶ್ನೆ ಕೇಳಬಯಸುತ್ತೇನೆ. ಜೊತೆಗೆ ತಾವು ನಮಗೆ ಸಹಕಾರ ಕೊಡಬೇಕಾಗುತ್ತದೆ. ಏಕೆಂದರೆ ಪ್ರಶ್ನೆಗಳಿಗೆ ಇಂತಹ ಉತ್ತರ ಸರ್ಕಾರ ಕೊಟ್ಟಾಗ ಕ್ಷೇತ್ರದ ಜನರಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಆದ್ದರಿಂದ ತಮ್ಮ ಮೂಲಕ ಆದರೂ ಫಲಿತಾಂಶ ಪಡೆಯುವ ಆಸೆಯಿಂದ ನಾನಿದ್ದೇನೆ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಸ್ಥಳಗಳನ್ನು ನಾನು ಸ್ವತಃ ಹೋಗಿ ನೋಡಿದ್ದೇನೆ. ಅಲ್ಲಿ ರಸ್ತೆ ವೈಡನ್ ಮಾಡದೆ ಇದ್ದರೆ ಎಂಥದ್ದೇ ಯಾತ್ರಿಕ

ನಿವಾಸ ಕಟ್ಟಿದರೂ ಪ್ರಯೋಜನವಾಗುವುದಿಲ್ಲ. ಅದು ಬಹಳ ಅಪಾಯದ ನ್ಯಾರೊ ರಸ್ತೆಯಾಗಿದೆ. ಆ ಸ್ಥಳಕ್ಕೆ ಈಗಿನ ರಸ್ತೆಯಲ್ಲೇ ಹಾಗೋ ಹೀಗೋ ಹೋಗಿಬರುತ್ತಾರೆ. ದೊಡ್ಡದಾಗಿ ಯಾತ್ರಿಕ ನಿವಾಸ ಮಾಡುವುದಕ್ಕಾಗಿ ಹಣವಿದೆ. ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ಕೆಲಸ ಆಗಿಲ್ಲ, ಸ್ವತಃ ನಾನೇ ಹೋಗಿ ನೋಡಿಬಂದಿದ್ದೇನೆ, ಅದಕ್ಕೆ ಮಾನ್ಯ ಸದಸ್ಯರು ಸ್ವಲ್ಪ ತಡೆಯಬೇಕು. ಏನೂ ಆಗಿಲ್ಲ ಅಂತಲ್ಲ, ಮಾಡುತ್ತೇವೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಅವರಾಡಿದ ಮಾತಿನಿಂದ ನಾನು ಮತ್ತೆ ಬದುಕುತ್ತೀನೆ ಎಂಬ ಆಸೆ ಉಂಟಾಯಿತು.

ವಿಷಯ:- ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿ ಪೋಲೀಸ್ ವಸತಿ ಗೃಹಗಳ ದುರಸ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 174 (1019)

ಶ್ರೀ ಎನ್.ರಾಜಣ್ಣ (ಭಾರತೀನಗರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿ ಪೋಲೀಸ್ ವಸತಿಗೃಹಗಳ ಒಟ್ಟು ಸಂಖ್ಯೆ ಎಷ್ಟು?

ಆ) 1995-96ನೇ ಸಾಲಿನಲ್ಲಿ ಈ ವಸತಿಗೃಹಗಳ ರಿಪೇರಿಗಾಗಿ ವೆಚ್ಚಮಾಡಿರುವ ಮೊತ್ತ.

ಇ) ಈ ವಸತಿಗೃಹಗಳಲ್ಲಿ ಶೌಚಾಲಯಗಳನ್ನು ಮತ್ತು ಇತರೆ ಸೌಲಭ್ಯಗಳನ್ನು ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) 1996-97ನೇ ಸಾಲಿನಲ್ಲಿ ಈ ಎಲ್ಲಾ ವಸತಿಗೃಹಗಳ ದುರಸ್ಥಿಯನ್ನು ಕೈಗೊಳ್ಳುವಲ್ಲಿ ತೆಗೆದುಕೊಂಡ ಸೂಕ್ತ ಕಾರ್ಯಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಒಟ್ಟು ಸಂಖ್ಯೆ 270.

ಆ) 3,69,180 ರೂ.ಗಳು

ಇ) ಶೌಚಾಲಯಗಳನ್ನು ಮತ್ತು ಇತರೆ ಸೌಲಭ್ಯಗಳನ್ನು ವಸತಿಗೃಹಗಳ ನಿರ್ಮಾಣ ಹಂತದಲ್ಲೇ ಒದಗಿಸಲಾಗಿರುತ್ತದೆ.

ಈ) ಸಾಮಾನ್ಯ ದುರಸ್ಥಿಗಳನ್ನು ಕಾಲ ಕಾಲಕ್ಕೆ ಮಾಡಲಾಗುತ್ತಿದೆ. ಅವಶ್ಯಕತೆಗೆ ಅನುಗುಣವಾಗಿ 1996-97ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನುಸಾರ ದುರಸ್ಥಿ